ಕಲಬುರಗಿ ಜಿಲ್ಲೆಯ ಟೆಂಡರ್ ಕಾಮಗಾರಿಯ ಬಗ್ಗೆ

140(1991); ಶ್ರೀ ದತ್ತಾತ್ರೇಯ ಸಿ. ಪಾಟೀಲ ರೇವೂರ (ಅಪ್ಪುಗೌಡ) (ಕಲಬುರ್ಗಿ ದಕ್ಷಿಣ)

ಅ) 2011–12 ರಿಂದ ಇಲ್ಲಿಯವರೆಗೆ ಕಲಬುರಗಿ ಜಿಲ್ಲೆಯಲ್ಲಿ ಸರ್ಕಾರದ ಅನುದಾನದ ಟೆಂಡರ್ ಕರೆದ ಕಾಮಗಾರಿಗಳು ಎಷ್ಟು ಚಾಲ್ತಿಯಲ್ಲಿವೆ;

ಆ) ಟೆಂಡರ್ ಕರೆದ ಕಾಮಗಾರಿಗಳ ಅವಧಿ ಮುಗಿದರೂ ಎಷ್ಟು ಕಾಮಗಾರಿಗಳು ಅಪೂರ್ಣಗೊಂಡಿವೆ;

ಇ) ಎಷ್ಟು ಕಾಮಗಾರಿಗಳನ್ನು ರದ್ದುಪಡಿಸಿ ಪುನಃ ಟೆಂಡರ್ ಕರೆಯಲಾಗಿದೆ?

ಶ್ರೀ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) 2011–12 ರಿಂದ ಇಲ್ಲಿಯವರೆಗೆ ಕಲಬುರಗಿ ಜಿಲ್ಲೆಯಿಂದ ಬರುವ ಕಲಬುರಗಿ ಹಾಗೂ ಸೇಡಂ ವಿಭಾಗಗಳಲ್ಲಿ ಸರ್ಕಾರದ ಅನುದಾನದ ಟೆಂಡರ್ ಕರೆದು ಚಾಲ್ತಿಯಲ್ಲಿರುವ (ಪ್ರಗತಿಯಲ್ಲಿರುವ) ಕಾಮಗಾರಿಗಳ ಸಂಖ್ಯೆ ಕೆಳಗಿನಂತಿವೆ:–

ಕ್ರ.ಸಂ.	ವರ್ಷ	ಕಲಬುರಗಿ ವಿಭಾಗ		ಸೇಡಂ ವಿಭಾಗ	
		ಒಟ್ಟು ಕಾಮಗಾರಿಗಳ ಸಂಖ್ಯೆ	ಚಾಲ್ತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ	ಒಟ್ಟು ಕಾಮಗಾರಿಗಳ ಸಂಖ್ಯೆ	ಚಾಲ್ತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ
1	2011–12	636	03	–	–
2	2012–13	464	–	–	–
3	2013–14	296	49	281	37
4	2014–15	214	214	293	207

ಆ) ಯಾವ ಕಾಮಗಾರಿಗಳು ಇರುವುದಿಲ್ಲ.

ಇ) ಲೋಕೋಪಯೋಗಿ ಇಲಾಖೆ ಕಲಬುರಗಿ ವಿಭಾಗದಲ್ಲಿ 1 ಕಾಮಗಾರಿ ಹಾಗೂ ಸೇಡಂ ವಿಭಾಗದಲ್ಲಿ 4 ಕಾಮಗಾರಿಗಳನ್ನು ರದ್ದುಪಡಿಸಿ ಪುನಃ ಟೆಂಡರ್ ಕರೆಯಲಾಗಿದೆ.

ಬೆಳೆ ವಿಮೆ ಯೋಜನೆ

1841(1992); ಶ್ರೀ ದತ್ತಾತ್ರೇಯ ಸಿ. ಪಾಟೀಲ ರೇವೂರ (ಅಪ್ಪುಗೌಡ)

ಅ) ಸರ್ಕಾರ ಮಾರ್ಗಸೂಚಿಯಂತೆ ಬೆಳೆ ವಿಮೆ ಯೋಜನೆ ರಾಜ್ಯದಲ್ಲಿ ಜಾರಿಗೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ವಿಮೆ ಮಂಜೂರು ಮಾಡಲಾಗಿದೆ;

ಇ) ಮಾರ್ಗಸೂಚಿಯಂತೆ ಖಾಸಗಿ ವಿಮಾ ಕಂಪನಿಗಳು ಈ ವಿಷಯದಲ್ಲಿ ರೈತರಿಗೆ ಸಹಕರಿಸುತ್ತಿವೆಯೇ?

ಈ) ಹಾಗಿದ್ದಲ್ಲಿ, ಕಲಬುರಗಿ ಜಿಲ್ಲೆಗೆ ಎಷ್ಟು ಬೆಳೆ ವಿಮೆ ಜಾರಿಯಾಗಿದೆ?

ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು)

ಅ) ಹೌದು, ಬೆಳೆ ವಿಮಾ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರಾಜ್ಯದಲ್ಲಿ

1. ರಾಷ್ಟ್ರೀಯ ಕೃಷಿ ವಿಮಾ ಯೋಜನೆ (2000–01 ರಿಂದ 2013ರ ಮುಂಗಾರು),
2. ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ (2007ರ ಮುಂಗಾರಿನಿಂದ ಇಲ್ಲಿಯವರೆಗೆ) ಮತ್ತು
3. ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಗಳನ್ನು (ಪ್ರಾಯೋಗಿಕವಾಗಿ 4 ಜಿಲ್ಲೆಗಳಲ್ಲಿ 2010–11ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಿಂದ 2013ರ ಮುಂಗಾರು & 2013–14ರ